ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 149-154
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕದ ಮಹಿಳಾ ಸಬಲೀಕರಣದ ಮೇಲೆ ಜಾಗತೀಕರಣದ ಪರಿಣಾಮ

**ಕರಿಯಮ್ಮ ಜಿ.ಕೆ**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗೋಡಿ,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಬೆಂಗಳೂರು

**Abstract:**
*ಜಗತ್ತಿನ ಜನಸಂಖ್ಯೆಯಲ್ಲಿ ಶೇ 48.5ರಷ್ಟು ಮಹಿಳೆಯರಿದ್ದು, ಇವರ ಸಬಲೀಕರಣಕ್ಕಾಗಿ ನಡೆದ ಪ್ರಯತ್ನಗಳಲ್ಲಿ ಜಾಗತೀಕರಣವೂ ಒಂದು. ಜಾಗತೀಕರಣದಿಂದಾಗಿ ಕ್ರಾಂತಿಕಾರಕ ಬದಲಾವಣೆ ಆಗಿದೆ. ಹಾಗೆಯೇ ಅನೇಕ ಸವಾಲುಗಳು ಮತ್ತು ಅವಕಾಶಗಳು ಸಹಾ ಸೃಷ್ಟಿಯಾಗಿದೆ. ಇಂತಹ ಸವಾಲುಗಳು ಸಾಮಾನ್ಯವಾಗಿ ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳಲ್ಲಿ ಅಧಿಕವಾಗಿ ಕಂಡುಬರುತ್ತದೆ. ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲೂ ಜಾಗತೀಕರಣದ ಪರಿಣಾಮದಿಂದ ವಿವಿಧ ರೀತಿಯ ಏರಿಳಿತ ಕಂಡುಬರುತ್ತದೆ. ಭಾರತದ ಸಂದರ್ಭದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಕೈಗಾರಿಕೆಗಳಲ್ಲಿ ಹೆಣ್ಣು ಮಕ್ಕಳ ಸೇರ್ಪಡೆ, ಕೌಶಲ್ಯ ಶಿಕ್ಷಣ, ಉತ್ಪಾದಕತೆಯನ್ನು ಹೆಚ್ಚಿಸುವುದು ಕೆಲವೊಂದು ಸೌಕರ್ಯಗಳ ಒದಗಿಸುವುದರಿಂದ ಗೃಹಾಧಾರಿತ, ಉದ್ದಿಮೆಗಳ ಬೆಳವಣಿಗೆ ಮುಂತಾದವುಗಳಿಂದ ಮಹಿಳೆಯರ ಸ್ಥಿತಿಗತಿ ನಿಧಾನವಾಗಿ ಸುಧಾರಿಸುತ್ತಿದೆ.*

***Keywords:*** *ಜಾಗತೀಕರಣ, ಮಹಿಳೆ ಮತ್ತು ಸಬಲೀಕರಣ, ಕೌಶಲ್ಯ ಶಿಕ್ಷಣ, ಅಭಿವೃದ್ಧಿಶೀಲ ರಾಷ್ಟ್ರ.*

## ಪೀಠಿಕೆ

ಜಗತ್ತಿನ ಜನಸಂಖ್ಯೆಯಲ್ಲಿ ಶೇ.50ರಷ್ಟಿರುವ ಮಹಿಳೆಯರು ವಿವಿಧ ಕಾರಣಗಳಿಂದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರವನ್ನೊಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದ್ದಾರೆ. ಪುರುಷ ಮತ್ತು ಮಹಿಳೆ ಕೆಲಸಗಾರರ ನಡುವೆ, ಸಂಘಟಿತ ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವೆ, ಗ್ರಾಮೀಣ ಮತ್ತು ನಗರ ಪ್ರದೇಶದ ಕೆಲಸಗಾರರ ನಡುವೆ ಸಾಕಷ್ಟು ವ್ಯತ್ಯಾಸ ಮತ್ತು ತಾರತಮ್ಯವನ್ನು ಗುರುತಿಸಬಹುದಾಗಿದೆ. ಜಾಗತಿಕ ಮಟ್ಟದಲ್ಲಿ 380 ಮಿಲಿಯನ್ ಕೆಲಸಗಾರರಲ್ಲಿ 93%ರಷ್ಟು ಜನರು ಅಸಂಘಟಿತ ವಲಯದಲ್ಲಿದ್ದಾರೆ. 1999–2000 ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ ಶೇಕಡ 65%ರಷ್ಟು ಗ್ರಾಮೀಣ ಪ್ರದೇಶದ ಕಾರ್ಮಿಕರು ನಗರ ಪ್ರದೇಶಗಳಿಗೆ ವಲಸೆ ಬಂದವರಾಗಿದ್ದಾರೆ. ಶೈಕ್ಷಣಿಕ ಕೊರತೆ, ಕೌಶಲ್ಯದ ಕೊರತೆ, ತರಬೇತಿಯ ಕೊರತೆಗಳಿಂದಾಗಿ ಕನಿಷ್ಠ ಕೂಲಿಗಿಂತಲೂ ಕಡಿಮೆ ಕೂಲಿ ಪಡೆದು ಈ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅಸಂಘಟಿತ ವಲಯದಲ್ಲಿ ದುಡಿಯುವವರಲ್ಲಿ ಶೋಷಣೆ, ವೇತನ ತಾರತಮ್ಯ, ಲಿಂಗತಾರತಮ್ಯ, ಆರೋಗ್ಯ ಸಮಸ್ಯೆಗಳು ಸಾಮಾನ್ಯವಾಗಿದ್ದು ಇವು ಆರ್ಥಿಕ ಚಟುವಟಿಕೆಗಳ ಮೇಲೆ ತೀವ್ರತರ ಪರಿಣಾಮ ಬೀರುತ್ತಿವೆ.

***Please cite this article a:*** ಕರಿಯಮ್ಮ ಜಿ.ಕೆ. (2023). ಕರ್ನಾಟಕದ ಮಹಿಳಾ ಸಬಲೀಕರಣದ ಮೇಲೆ ಜಾಗತೀಕರಣದ ಪರಿಣಾಮ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(1), 149–154.

**ಜಾಗತೀಕರಣ ಮತ್ತು ಮಹಿಳಾ ಸಬಲೀಕರಣದಲ್ಲಿ**

ಜಾಗತೀಕರಣ ಎಂಬ ಪರಿಕಲ್ಪನೆಯನ್ನು ಪ್ರಥಮ ವಾಗಿ ಅಮೇರಿಕಾದ 'ಹಾರ್ವರ್ಡ್ ಬಿಸಿನೆಸ್ ಸ್ಕೂಲ್' ಎಂಬ ಸಂಸ್ಥೆಯ ಪ್ರಾಧ್ಯಾಪಕರಾದ ಥಿಯೋಡರ್ ಲೆವಿಟ್ ಎಂಬುವವರು ಪರಿಚಯಿಸಿದರು. ಜಾಗತೀಕ ರಣವು ಆರ್ಥಿಕ ವಹಿವಾಟಿನ ಮೂಲಕ ಜಗತ್ತಿನ ದೇಶಗಳನ್ನು ಮತ್ತು ಸಂಸ್ಕೃತಿಗಳನ್ನು ಒಂದು ಮಾಡಿ ಬೆಸೆಯುವ ಪ್ರಕ್ರಿಯೆಯೇ ಆಗಿದೆ. ಮಹಿಳಾ ಸಬಲೀಕರಣವು ಒಂದು ಪ್ರಕ್ರಿಯೆಯಾಗಿದ್ದು 1960 ಮತ್ತು 1970ರ ಕಾಲಘಟ್ಟದಿಂದಲೂ ಈ ಪ್ರಯತ್ನಗಳು ನಡೆಯುತ್ತಿದೆ. ಸಾಮಾಜಿಕ, ಆರ್ಥಿಕ, ಸಂವಿಧಾನಾತ್ಮಕ ಪ್ರಕ್ರಿಯೆಯ ಬಗ್ಗೆ ಸಾರ್ವಜನಿಕವಾಗಿ ಸಮರ್ಥಿಸುವ ಹಾಗೂ ವಿರೋಧಿಸುವ ವಾದಗಳು ಮುಂದುವರೆದಿದೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ನಡೆದಿದ್ದರೂ ಕೂಡ ಮಹಿಳಾ ಸಬಲೀಕರಣವನ್ನು ಜಾಗತೀಕರಣದ ಮೂಲಕ ಹೇಗೆ ಸಾಧಿಸಬಹುದು ಎಂಬುದನ್ನು ಈ ಲೇಖನಲ್ಲಿ ಕಂಡುಕೊಳ್ಳಲಾಗಿದೆ.

ಆರ್ಥಿಕ ಚಿಂತಕರು ಜಾಗತೀಕರಣವನ್ನು ಪ್ರಯೋಗಾತ್ಮಕವಾಗಿ ಚಿಂತನೆಗೆ ಒಳಪಡಿಸಿದರು. ಜಾಗತೀಕರಣದಿಂದಾಗಿ ತೀವ್ರತರವಾದ ಬದಲಾವಣೆಗೆ ಕಾರಣವಾಗಲಿದೆ ಎಂಬುದು ಚಿಂತಕರ ಅಭಿಪ್ರಾಯ ವಾಗಿತ್ತು. ಕೈಗಾರಿಕೀಕರಣ, ನಗರೀಕರಣ, ಉದಾರೀಕ ರಣ, ಜಾಗತೀಕರಣ ಹಾಗೂ ಆಧುನಿಕರಣದ ಪ್ರಕ್ರಿಯೆಗಳಿಂದಾಗಿ ಮಹಿಳಾ ಸಬಲೀಕರಣದ ಧನಾತ್ಮಕ ಹಾಗೂ ಋಣಾತ್ಮಕ ಎರಡೂ ರೀತಿಯ ಪರಿಣಾಮಗಳು ಸಂಭವಿಸುತ್ತಿವೆ. ಜಾಗತೀಕರಣವು ಬೇರೆ ಬೇರೆ ಕಾಲಘಟ್ಟದಲ್ಲಿ ಬೆಳವಣಗೆಯಾಗಿದ್ದರೂ 20ನೇ ಶತಮಾನದ ಉತ್ತರಾರ್ಧ ಅದರ ಕೊನೆಯ ಎರಡು ದಶಕಗಳು ಅತ್ಯಂತ ವಿಶಿಷ್ಟವಾದ ಮಹತ್ವಪೂರ್ಣವಾದ ಕಾಲಘಟ್ಟವೆಂದು ಪರಿಗಣಿಸ ಬಹುದು. ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಚರಿಸುತ್ತಿರುವ ಬಂಡವಾಳ, ಸರಕು–ಸೇವೆಗಳ ಮೌಲ್ಯ, ಭಾವನೆಗಳ, ಆದರ್ಶ–ಆಶಯಗಳ ಚಲನೆಯ ಪರಿಣಾಮವಾಗಿ ಉದ್ಭವಿಸುವ ಸಮ್ಮತಿ ಮತ್ತು ಅಸಮ್ಮತಿಗಳಿಂದ ಮಿಶ್ರತವಾಗಿರುವ ಪರಸ್ಪರಾ ವಲಂಬನೆಯ ದೃಶ್ಯಾವಳಿಗಳನ್ನು ಸೆರೆ ಹಿಡಿಯಲು ಬಳಸುತ್ತಿರುವ ಈ ರೂಪಕ ಅತ್ಯಂತ ಸಂಕೀರ್ಣವಾದ ಬಹುಸ್ತರಗಳ ತಾತ್ವಿಕ ಮತ್ತು ಪ್ರಾಯೋಗಿಕ ಅರ್ಥವನ್ನು ಪಡೆದುಕೊಂಡಿದೆ.

ಪ್ರಪಂಚ ಕಳೆದೆರಡು ದಶಕಗಳಲ್ಲಿ ಈ ಪ್ರಕ್ರಿಯೆಯ ಪ್ರಭಾವದಿಂದ ಆರ್ಥಿಕ ಬದಲಾವಣೆಯ ಉನ್ಮಾದದಲ್ಲಿ ಸಿಲುಕಿದೆ. ಜಾಗತೀಕರಣವು ಪ್ರಮುಖ ವಾಗಿ ಎಲ್ಲಾ ವಿಷಯಗಳಲ್ಲಿನ ಸಂಪೂರ್ಣವಾದ ಚಿತ್ರಣನ್ನು ಒಳಗೊಂಡಿದೆ. ಡಿಕಿನ್ಸ್ ಅವರು "ಜಾಗತೀಕವಾಗಿ ಹರಡಿರುವ ಆರ್ಥಿಕ ಚಟುವಟಿಕೆ ಗಳನ್ನು ಸಂಕೀರ್ಣಗೊಳಿಸುವುದೇ ಜಾಗತೀಕರಣ ವಾಗಿದೆ ಅಂದರೆ ಆರ್ಥಿಕ ವ್ಯವಹಾರಗಳ ವಿಸ್ತರಣೆಯೇ ಆಗಿದೆ" ಎಂದಿದ್ದಾರೆ. ಜಾಗತೀಕರಣ ಪ್ರಕ್ರಿಯೆಯು ರಾಷ್ಟ್ರ–ರಾಷ್ಟ್ರಗಳನ್ನು ಬೇರ್ಪಡಿಸುವ ಆರ್ಥಿಕ ಗಡಿರೇಖೆಗಳನ್ನು ಅಳಿಸಿ ವಿವಿಧ ರಾಷ್ಟ್ರಗಳ ಅರ್ಥವ್ಯವಸ್ಥೆಯನ್ನು ಸ್ಥಾಪಿಸುವುದು. ವಿಶ್ವ ವ್ಯಾಪಾರ ಸಂಘಟನೆಯ ಪ್ರಮುಖ ನೀತಿ–ನಿರ್ಧಾರಗಳು, ವಿಶೇಷವಾಗಿ ಬಂಡವಾಳದ ನಿಯಂತ್ರಣಕ್ಕೆ ಸಂಬಂಧಪಟ್ಟ ತೀರ್ಮಾನಗಳು, ಜಾಗತೀಕ ಒಗ್ಗೂಡುವಿಕೆಯೇ ಸಾಲದಾತರ ಕಕ್ಷೆಯಲ್ಲಿರುತ್ತದೆ ಆದ್ದರಿಂದ ಈ ಪ್ರಕ್ರಿಯೆ ಆಚರಣೆಗೆ ಪ್ರೋತ್ಸಾಹಿಸುವ ಪ್ರಜಾಪ್ರಭುತ್ವವನ್ನು ಕೆಲವೇ ಕೆಲವು ಎಲಿಟ್‌ಗಳಿಂದ ನಡೆಸಲ್ಪಡುತ್ತಿರುವ ಎಲಿಟ್ ಪ್ರಜಾಪ್ರಭುತ್ವ ಎಂಬುದಾಗಿದೆ.

ಜಾಗತೀಕರಣವು ಪ್ರಮುಖವಾಗಿ 5 ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ (ಅ)ರಾಷ್ಟ್ರೀಯ ಆಂತರಿಕ ಸಮಗ್ರ ಉತ್ಪಾದನೆ ಆಮದು ರಫ್ತಿಗೂ ಇರುವ ಪರಿಮಾಣ (ಬಿ)ವಿದೇಶಿ ನೇರ ಬಂಡವಾಳ ಹೂಡಿಕೆ (ಸಿ)ತಂತ್ರಜ್ಞಾನದ ವರ್ಗಾವಣೆಯ ಸ್ವರೂಪ (ಡಿ)ಉತ್ಪಾದನೆಯ ವ್ಯಾಪ್ತಿ ಮತ್ತು ಸ್ವರೂಪ (ಇ)ಸರ್ಕಾರ ಸರ್ಕಾರೇತರ ಸಂಘಸಂಸ್ಥೆಗಳ ಪಾತ್ರ. ಜಾಗತೀಕರಣ ಪ್ರಕ್ರಿಯೆಯು ಆರ್ಥಿಕ, ಸಾಮಾಜಿಕ,

ರಾಜಕೀಯ, ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದೆ. ಜಾಗತೀಕರಣವು ಮಹಿಳಾ ಸಬಲೀಕರಣದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದು, ಜಾಗತೀಕರಣವು ಮಹಿಳಾ ಸಬಲೀಕರಣದಲ್ಲಿ ವಹಿಸುವ ಪಾತ್ರ ಹಾಗೂ ಇದು ತಂದಂತಹ ಅನೇಕ ಪ್ರಮುಖ ಧನಾತ್ಮಕ ಬದಲಾವಣೆಗಳಾಗಿವೆ.

**ಜಾಗತೀಕರಣದಿಂದಾದ ಧನಾತ್ಮಕ ಪರಿಣಾಮಗಳು**

ಜಾಗತೀಕರಣವು ಬಹುಮುಖವಾದ, ಬಹು ಆಯಾಮಗಳ, ಬಹುಸಂಕೀರ್ಣವಾದ ಹಾಗು ಬಹು ವ್ಯಾಪಕವಾದ ಪ್ರಭಾವವುಳ್ಳ ಪ್ರಕ್ರಿಯೆಯಾಗಿದೆ. ಇಂತಹ ಪ್ರಭಾವವುಳ್ಳ ಜಾಗತೀಕರಣದಿಂದಾಗಿ ಮಹಿಳೆಯ ಸಬಲೀಕರಣಕ್ಕೆ ತಕ್ಕಮಟ್ಟಿಗೆ ಅನುಕೂಲ ವಾಗಿದ್ದು, ಕೆಳಗಿನಂತೆ ಸಂಕ್ಷಿಪ್ತಗೊಳಿಸಬಹುದಾಗಿದೆ.

**ಔದ್ಯೋಗಿಕ ಕ್ಷೇತ್ರದಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚಳ**

ಭಾರತದ ಮಟ್ಟಿಗೆ ಹೇಳುವುದಾದರೆ ಜಾಗತೀಕರಣದಿಂದಾಗಿ ಮಹಿಳೆಯರಿಗೆ ಉದ್ಯೋಗ ಅವಕಾಶಗಳು ಹೆಚ್ಚಿಗೆಯಾಗಿದೆ. ಅದರಲ್ಲೂ ಕೆಲವೊಂದು ಉದ್ದಿಮೆಗಳು ಮಹಿಳೆ ಪ್ರಧಾನವಾಗಿದೆ. ಜಾಗತೀಕರಣದ ಹಿನ್ನೆಲೆಯಲ್ಲೆ ಅನೇಕ ಉದ್ದಿಮೆಗಳು ಸ್ಥಾಪನೆಗೊಂಡಿವೆ. ಕೆಲವು ಉದ್ದಮೆಗಳಲ್ಲಿ ಮಹಿಳೆಯರೇ ಅಪಾರ ಸಂಖ್ಯೆಯಲ್ಲಿದ್ದಾರೆ. ಸಿದ್ದ ಉಡುಪು, ಆಟಿಕೆಗಳ ತಯಾರಿಕೆ, ಮಾಹಿತಿ ಸಂಸ್ಕರಣೆಗೊಳಿಸುವ, ಉತ್ಪಾದನಾ ಚಟುವಟಿಕೆ, ಕರಕುಶಲ ಉದ್ದಿಮೆಗಳು, ನೂಲುತಯಾರಿಕೆ, ರೇಷ್ಮೆ ತಯಾರಿಕೆ, ಕೈಗಾರಿಕೆಗಳಿಗೆ ಅವಶ್ಯಕವಾದ ವಸ್ತುಗಳು, ಕುಸುರಿ ಕೆಲಸಗಳು, ಕಲಾತ್ಮಕ ಉತ್ಪನ್ನಗಳಲ್ಲಿ ಮಹಿಳೆಯರು ವ್ಯಾಪಕವಾಗಿ ತೊಡಗಿಸಿಕೊಂಡಿದ್ದಾರೆ. ಕಾಲ್‌ಸೆಂಟರ್‌ಗಳಲ್ಲಂತೂ 40% ಸ್ತ್ರೀಯರಿದ್ದಾರೆ.

**ಮಹಿಳಾ ಶಿಕ್ಷಣದಲ್ಲಿ ಪ್ರಗತಿಯಾಗಿರುವುದು**

ಸಾಮಾನ್ಯವಾಗಿ ಭಾರತದಂತಹ ಅಭಿವೃದ್ದಿಶೀಲ ದೇಶಗಳಲ್ಲಿ ಸ್ತ್ರೀಯರು ಉನ್ನತ ಶಿಕ್ಷಣದತ್ತ ದಾಪುಗಾಲಿಡುತ್ತಿದ್ದಾರೆ. ಸಂಪ್ರಾದಾಯ ಶಿಕ್ಷಣವು ಜ್ಞಾನಾಧಾರಿತ ಶಿಕ್ಷಣವಾಗಿದ್ದು ಜಾಗತೀಕರಣದಿಂದಾಗಿ ಉದ್ಯೋಗಾರಿತ ಶಿಕ್ಷಣ ದೊರಕುವಂತಾಗಿದೆ. ವೃತ್ತಿಯಾಧಾರಿತ ಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಏರಿದೆ. ತಾಂತ್ರಿಕ, ವೈದ್ಯಕೀಯ, ವೃತ್ತಿಪರ ಕೋರ್ಸುಗಳಾದ ಸೈನ್ಯ, ವೈಮಾನಿಕ, ಅಂತರಿಕ್ಷಯಾನ ಹಾಗೂ ಕಾನೂನು ಶಿಕ್ಷಣ ಮೊದಲಾದವುಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಉನ್ನತ ಶಿಕ್ಷಣದಲ್ಲಿ ಪ್ರಗತಿ ಸಾಧಿಸಿರುವುದರಿಂದ ಆರ್ಥಿಕ ಸ್ವಾವಲಂಬನೆ, ಸಾಮಾಜಿಕವಾಗಿ ಗುರುತಿಸಿ ಕೊಳ್ಳುತ್ತಿರುವುದು, ಸಂಸ್ಕೃತಿಯ ಪ್ರತಿನಿಧಿಯಾಗಲು ಸಾಧ್ಯವಾಗಿದೆ.

**ಮಹಿಳೆಯ ಪ್ರತಿಭೆ ಅರ್ಹತೆಗೆ ಗೌರವ ದೊರಕಿದೆ**

ಜಾಗತೀಕರಣವು "ಅರ್ಹರಿಗೆ ಅವಕಾಶ"ಎಂಬ ತತ್ವವನ್ನು ಮುಂದುವರೆಸಿಕೊಂಡು ಬಂದಿದ್ದು ವ್ಯಕ್ತಿಗಳನ್ನು ಲಿಂಗ, ಜಾತಿ, ಮತಧರ್ಮ ಹಿನ್ನೆಲೆಯಲ್ಲಿ ಆಯ್ಕೆ ಮಾಡುವ ಪದ್ದತಿ ಕೊನೆಗೊಂಡಿದೆ. ಮಹಿಳೆಯ ಪ್ರತಿಭೆ, ಸಾಮರ್ಥ್ಯ, ಕೌಶಲ, ಶಿಕ್ಷಣಕ್ಕೆ ಹೆಚ್ಚಿನ ಬೆಲೆಯಿದೆ. ಆಕೆ ತನ್ನ ಸಾಮಾರ್ಥ್ಯದಿಂದಾಗಿ ಹೊರದೇಶಗಳಿಗೆ ಹೋಗಿ ತರಬೇತಿ ಪಡೆದು ಉನ್ನತ ಸ್ಥಾನ ಅಲಂಕರಿಸುವ ಅವಕಾಶ ಆಕೆಗೆ ಲಭ್ಯವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಜಾಗತೀಕರಣದಿಂದ ಸಾಧ್ಯವಾಗಿದೆ.

**ಲಿಂಗಸಮಾನತೆಗೆ ಒತ್ತು ನೀಡಲಾಗಿದೆ**

ಜಾಗತೀಕರಣವು ಇಡೀ ಅರ್ಥವ್ಯವಸ್ಥೆಯ ಮೇಲೆ ಪ್ರಭಾವಬೀರಿದೆ. ಉದ್ಯೋಗ ಎಂಬುದು ಪುರುಷರಿಗೆ ಮಾತ್ರ ಎಂಬ ಕಲ್ಪನೆ ಸುಳ್ಳಾಗಿದೆ. ಕುಟುಂಬದಲ್ಲಿನ ಶಿಕ್ಷಣ, ಆಹಾರ, ಆರೋಗ್ಯ, ಉದ್ಯೋಗ, ವಿವಾಹ ಮುಂತಾದ ಪರಿಕಲ್ಪನೆಗಳನ್ನೇ ಸಾಕಷ್ಟು ಬದಲಾಯಿಸಿದೆ. ಹೆಣ್ಣನ್ನು ಸಮಾಜದಲ್ಲಿ ನೋಡುವ ದೃಷ್ಟಿ ಬದಲಾಗಿದೆ. ಲಿಂಗ ಸಮಾನತೆಗಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ಸಮ್ಮೇಳನಗಳು, ಸಭೆಗಳು ಜರಗುತ್ತಲಿವೆ. ಮೊದಲು ಸ್ತ್ರೀಪುರುಷರ ಸಂಬಂಧಗಳು ಭಾವನಾತ್ಮಕವಾಗಿ ಅಲ್ಲವಾದರೂ ಸಾಂಸ್ಥಿಕವಾಗಿ ದುರ್ಬಲವಾಗಿತ್ತು. ಸ್ತ್ರೀಯರ ಮಾತಿಗೆ, ಅಭಿಪ್ರಾಯಕ್ಕೆ ಕುಟುಂಬದಲ್ಲಿ ಅಷ್ಟೇನೂ

ಮಹತ್ವವಿರಲಿಲ್ಲ. ಕುಟುಂಬದ ಸದಸ್ಯರಿಗೆ ಸದಾ ವಿಧೇಯರಾಗಿರ ಬೇಕೆಂದು ನಿರೀಕ್ಷಿಸಲಾಗುತ್ತಿದ್ದಿತು. ಆದರೆ ಸಂಪ್ರದಾಯಿಕ ಹೆಣ್ಣು ಹೊರಗೆ ದುಡಿಯುತ್ತಿರುವುದರಿಂದ ಆಧುನಿಕ ಶೈಲಿ, ಸಂಭಾಷಣೆ, ನಡೆನುಡಿ, ಆಹಾರ, ವೇಷಭೂಷಣ, ಹೊಣೆಗಾರಿಕೆಯಲ್ಲಿ ಬಹಳಷ್ಟು ವ್ಯತ್ಯಾಸವಾಗಿದೆ.

**ಕೌಟುಂಬಿಕ ನಿಯಮಗಳಲ್ಲಿ ಬದಲಾವಣೆ**

ಶಿಕ್ಷಣ ಪಡೆಯುವಿಕೆ, ಉದ್ಯೋಗ, ಹಣ ಸಂಪಾದನೆ, ಸಂಪಾದನೆಯನ್ನು ಅನುಭವಿಸುವಿಕೆ, ವಿವಾಹ ಮೊದಲಾದ ಅನೇಕ ವಿಷಯಗಳಲ್ಲಿ ಜಾಗತೀಕರಣವು ಬದಲಾವಣೆ ತಂದಿದೆ. ಜಾಗತೀಕರಣದಿಂದ ವ್ಯಕ್ತಿ ಸ್ವಾತಂತ್ರ್ಯ, ಪ್ರತಿಭೆ, ಆಸಕ್ತಿ, ಅಭಿರುಚಿ, ವಿವಾಹ ಪದ್ಧತಿ, ಜೀವನಶೈಲಿ, ಕೌಟುಂಬಿಕ ನಿಯಮಗಳು, ಸಾಮಾಜಿಕ ಪದ್ಧತಿಗಳು, ಸಾಂಸ್ಕೃತಿಕ ಆಚರಣೆಗಳಲ್ಲಿ ಬದಲಾವಣೆಗೊಂಡಿದೆ.

**ಮಹಿಳೆಯರ ಆರ್ಥಿಕ ಸ್ವಾವಲಂಬನೆ**

ಜಾಗತೀಕರಣದ ಪ್ರಭಾವದಿಂದಾಗಿ ಮಹಿಳೆಯರು ಆರ್ಥಿಕವಾಗಿ ಸಾಕಷ್ಟು ಸ್ವಾವಲಂಬಿಯಾಗುತ್ತಿದ್ದಾರೆ. ಅನೇಕ ಸಂಘಟನೆಗಳು, ಅನೇಕ ಕೈಗಾರಿಕೆಗಳು, ಸೇವಾವಲಯ, ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು, ವಿಶ್ವಸಂಸ್ಥೆ ಮತ್ತು ಅದರ ಅಂಗಸಂಸ್ಥೆಗಳು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಶ್ರಮಿಸುತ್ತಿವೆ. ವಿಶ್ವಸಂಸ್ಥೆಯು 1975 ರಲ್ಲಿ "ಅಂತರಾಷ್ಟ್ರೀಯ ಮಹಿಳಾ ವರ್ಷ" ಎಂದು ಘೋಷಿಸಿದೆ.

**ಕಾನೂನಿನ ನೆರವು**

1975ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರಾಷ್ಟ್ರೀಯ ಮಹಿಳಾ ವರ್ಷ ಎಂಬುದಾಗಿ ಘೋಷಿಸಿದ್ದರೂ, 2003ರ ಮಾನವ ಅಭಿವೃದ್ಧಿ ವರದಿ ಪ್ರಕಾರ ಇಂದಿಗೂ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಸಂವಿಧಾನಾತ್ಮಕವಾಗಿ ಮಹಿಳೆಯರಿಗೆ ಕಾನೂನಿನ ರಕ್ಷಣೆ ನೀಡಲಾಗಿದೆ. ಭಾರತದಲ್ಲಿ ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯು ಮಹಿಳಾ ರಾಜಕೀಯ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದೆ. ಅಲ್ಲದೇ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ಮಹಿಳೆಯರ ಪಾತ್ರ ಹಿರಿದಾದುದು. ಮಹಿಳೆಯರು ಕ್ಲಿಷ್ಟ ಪರಿಸ್ಥಿಯನ್ನು ಎದುರಿಸುತ್ತಿದ್ದು, ಸಮಾಜ ಹಾಗೂ ಕುಟುಂಬ ಎರಡರಿಂದಲೂ ಸಾಕಷ್ಟು ತೊಂದರೆಯನ್ನು ಎದುರಿಸಿತ್ತಿದ್ದಾಳೆ. ಕುಟುಂಬದಲ್ಲಿನ ಬೆಂಬಲದ ಕೊರತೆ, ಲಿಂಗಭೇದ, ಅಸಮಾನತೆ ಹಾಗೂ ರಕ್ಷಣೆಯ ಸಮಸ್ಯೆಯನ್ನು ಎದುರಿಸುತ್ತಿರುವ ಮಹಿಳೆಯರಿಗೆ ಅಗತ್ಯವಾಗಿ ಕಾನೂನುಗಳು ಅವಳ ಹಕ್ಕುಗಳು, ಶಕ್ತಿ ಸಾಮರ್ಥ್ಯ, ಹೊಣೆಗಾರಿಕೆಯನ್ನು ಮನ್ನಿಸಬೇಕಾಗುತ್ತದೆ. ಕೌಟುಂಬಿಕ ಉಳಿವಿಗೆ ಸಮಾಜದ ಬೆಳವಣಿಗೆಗೆ ಮಹಿಳೆಯರ ಪಾತ್ರವು ಅಗತ್ಯ ಹಾಗೂ ಅನಿವಾರ್ಯವೂ ಹೌದು. ಆದ್ದರಿಂದ ಮಹಿಳಾ ಸಬಲೀಕರಣಕ್ಕೆ ಕಾನೂನುಗಳು ಅತಿ ಅವಶ್ಯಕವಾಗಿವೆ.

**ಜಾಗತೀಕರಣದಿಂದಾದ ನೇತ್ಯಾತ್ಮಕ ಪರಿಣಾಮಗಳು**

ಭಾರತದಲ್ಲಿ ಜಾಗತೀಕರಣದಿಂದ ಅನೇಕ ಧನಾತ್ಮಕ ಪರಿಣಾಮಗಳಾಗಿದ್ದರೂ ಅನೇಕ ರೀತಿಯ ದುಸ್ಥಿತಿಗೂ ಕಾರಣವಾಗಿದೆ. ಅದರಲ್ಲೂ ಜಾಗತೀಕರಣದಿಂದ ಅನೇಕ ಋಣಾತ್ಮಕ ಪರಿಣಾಮಗಳು ಆಗಿವೆ. ಜ್ಯೋತಿ ಮಿಶ್ರಾ ಅವರು ತಮ್ಮ ಕೃತಿಯಾದ "Globalization: Is it helping or hunting women?" ಭಾರತದಲ್ಲಿ ಮಹಿಳೆ ಎದುರಿಸುತ್ತಿರುವ ಸಮಸ್ಯೆ ಗಳನ್ನು ಚರ್ಚಿಸಿದ್ದಾರೆ. ಜಾಗತೀಕರಣದಿಂದ ದೇಶದ ಆರ್ಥಿಕ ವ್ಯವಹಾರಗಳು ರಾಷ್ಟ್ರೀಯ ಗಡಿಗಳನ್ನು ದಾಟಿ ಮುನ್ನುಗ್ಗುವುದರಿಂದ ದೇಶಗಳು ಹೆಚ್ಚು ಹೆಚ್ಚಾಗಿ ಪರಸ್ಪರಾವಲಂಬನೆಗೆ ಕಾರಣವಾಗುತ್ತದೆ.

**ಶ್ರೀಮಂತ ಮತ್ತು ಬಡದೇಶಗಳ ನಡುವಿನ ಅಂತರ ವಿಸ್ತರಣೆ**

ಅಭಿವೃದ್ಧಿಶೀಲ ರಾಷ್ಟ್ರಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ ಹಾಗೂ ಬಡದೇಶಗಳು ದಿವಾಳಿಯ ಅಂಚನ್ನು ತಲುಪಿದೆ. ಶ್ರೀಮಂತ ದೇಶಗಳು ಅವು ಹೊಂದಿರುವ ಉತ್ಕೃಷ್ಟ ಉತ್ಪಾದನಾ ಸಾಧನಗಳಿಂದಾಗಿ ಜಗತ್ತಿನ ಪ್ರತಿಭಾವಂತ ವ್ಯಕ್ತಿ ಹಾಗೂ ಜ್ಞಾನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಇದರಿಂದ ಹಿಂದುಳಿದ ರಾಷ್ಟ್ರಗಳು ಅಂತರಾಷ್ಟ್ರೀಯ

ಮಾರುಕಟ್ಟೆಯನ್ನು ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ಬಹಳಷ್ಟು ವಸ್ತುಗಳು ಬೇಡಿಕೆಯ ಕೊರತೆ ಅನುಭವಿಸುತ್ತಿವೆ.

**ಬಡದೇಶಗಳ ಕಾರ್ಮಿಕರ ಶೋಷಣೆ**

ಬಹುರಾಷ್ಟ್ರೀಯ ಕಂಪನಿಗಳಿಂದಾಗಿ ಅಭಿವೃದ್ದಿಶೀಲ ರಾಷ್ಟ್ರಗಳು ಹಾಗೂ ಬಡದೇಶಗಳಲ್ಲಿ ಮಹಿಳಾ ಕಾರ್ಮಿಕರ ಶೋಷಣೆಯಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಜಗತ್ತಿನ 25%ರಷ್ಟು ಜಾಗತೀಕ ಅರ್ಥವ್ಯವಸ್ಥೆಯನ್ನು ನಿಯಂತ್ರಿಸುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳಿಂದಾಗಿ ಅಭಿವೃದ್ದಿಶೀಲ ರಾಷ್ಟ್ರಗಳು ಹಾಗೂ ಬಡದೇಶಗಳನ್ನು ಉಸಿರಾಡಲು ಬಿಡದೆ ಚಿಕ್ಕಚಿಕ್ಕ ಘಟಕಗಳನ್ನು ಸಾಯಿಸುತ್ತಿದೆ. ಬಹು ರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪಾದನೆಯನ್ನು ಜಾಗತೀಕರಣಗೊಳಿಸಿದೆ. ಇದರಿಂದ ಸಣ್ಣ ಉದ್ದಿಮೆದಾರರು ನಾಶವಾಗುತ್ತಿದ್ದಾರೆ. ದೇಶೀಯ ಮಾರುಕಟ್ಟೆಗೆ ಶ್ರೀಮಂತ ದೇಶಗಳ ವಸ್ತುಗಳ ಮಾರಾಟ ಮಾಡಲು ಅವಕಾಶವಿರುವುದ್ದರಿಂದ ದೇಶೀಯ ವಸ್ತುಗಳು ಮೂಲೆಗುಂಪಾಗಿವೆ.

**ಸಾಂಸ್ಕೃತಿಕ ಆಕ್ರಮಣ**

ಜಾಗತೀಕರಣ ಸ್ವದೇಶಿಯರನ್ನು ತಾಯ್ನಾಡುಗಳಲ್ಲಿ ಪರಕೀಯವಾಗಿಸಿವೆ. ಅನಕ್ಷರಸ್ಥ, ಅಕುಶಲಿಗಳನ್ನು ಮೂಲೆಗುಂಪಾಗಿಸಿದೆ. ಅರ್ಹತೆಗೆ ಅವಕಾಶ ವಿಲ್ಲವಾಗಿದೆ. ಮೂಲ ಹಾಗೂ ಸಮಾಜ ವಿಜ್ಞಾನಗಳು ಕೂಡ ಮೂಲೆಗುಂಪಾಗಿವೆ.

**ಕೈಮಗ್ಗ ಹಾಗೂ ಕರಕುಶಲ ಉದ್ದಿಮೆಗಳ ನಾಶ**

ಸಂಪ್ರದಾಯಿಕ ಕೈಮಗ್ಗ ಹಾಗೂ ಕರಕುಶಲ ಉದ್ದಿಮೆಗಳು ಜಾಗತೀಕರಣದ ಸುಳಿಗೆ ಸಿಲುಕಿವೆ. ಈ ವೃತ್ತಿಗಳಾದ ನೇಕಾರಿಕೆ, ಶಿಲ್ಪಗಾರಿಕೆ, ಮಡಿಕೆ ತಯಾರಿಕೆ, ಆಟಿಕೆಗಳು, ಲೋಹಗಾರಿಕೆ, ಅಕ್ಕಸಾಲಿಗ, ಬಿದಿರಿಕಲೆ, ಕಂಬಳಿ ಉದ್ಯಮ, ಹಗ್ಗ ತಯಾರಿಕೆ, ಮಿಶ್ರಲೋಹ ಕಲೆ, ನಾರಿನ ಉತ್ಪನ್ನಗಳು ಮೊದಲಾದವುಗಳು ನಾಶ ಹೊಂದಿವೆ.

**ಮಹಿಳಾ ಮಾರಾಟಗಾರರ ಆರ್ಥಿಕ ಬದುಕಿಗೆ ದೊಡ್ಡ ಪೆಟ್ಟು**

ಬಹುರಾಷ್ಟ್ರೀಯ ಕಂಪನಿಗಳಿಂದಾಗಿ ಸಣ್ಣ ಪುಟ್ಟ ವ್ಯಾಪಾರಸ್ಥರು, ಉತ್ಪಾದಕರು, ಗುಡಿ ಮತ್ತು ಸಣ್ಣ ಕೈಗಾರಿಕೆಗಳಲ್ಲಿನ ಮಹಿಳೆಯರು ಉದ್ಯೋಗವನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದಿದ್ದಾರೆ.

**ನಗರಗಳಿಗೆ ಮಹಿಳಾ ವಲಸೆ ವ್ಯಾಪಕಗೊಂಡಿರುವುದು**

ಜಾಗತೀಕರಣದಿಂದಾಗಿ ಭಾರತದಲ್ಲಿ ಕೃಷಿಯು ಯಾಂತ್ರೀಕರಣಗೊಂಡಿರುವುದರ ಜೊತೆಗೆ ನಗರಗಳಿಗೆ ವಲಸೆ ಬರುವ ಪ್ರವೃತ್ತಿ ಅಧಿಕಗೊಂಡಿದೆ. ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ಪ್ರಕ್ರಿಯೆಗಳು ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

**ಕೈಗಾರಿಕೆಗಳ ಆಧುನೀಕರಣ**

ದೊಡ್ಡದೊಡ್ಡ ಕೈಗಾರಿಕೆಗಳಲ್ಲಿ ದುಡಿಯುವವರು ಕೌಶಲ್ಯ ಕಾರ್ಮಿರಾಗಿರಬೇಕು. ಆದರೆ ಗ್ರಾಮಗಳಿಂದ ಬಂದವರು ಅಕುಶಲಿಗಳಾಗಿರುವುದರಿಂದ ಉದ್ಯೋಗ ಕಳೆದುಕೊಳ್ಳಬೇಕಾಗುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ಬಯಸುವುದು ತಾಂತ್ರಿಕ, ವೃತ್ತಿನಿರತ ಮಹಿಳೆಯರನ್ನು ಆದ್ದರಿಂದ ಇವೆಲ್ಲವೂ ಜಾಗತೀಕರಣದಿಂದ ಉಂಟಾದ ಪರಿಣಾಮವೇ ಆಗಿದೆ.

ಒಟ್ಟಾರೆ ಜಾಗತೀಕರಣದಿಂದಾಗಿ ಧನಾತ್ಮಕ ಋಣಾತ್ಮಕ ಪರಿಣಾಮಗಳೆರಡೂ ಆಗಿರುವುದು ಕಂಡುಬರುತ್ತದೆ. ಜಾಗತೀಕ ಮಟ್ಟದಲ್ಲಿ ಉದ್ಯಮವು ಶೋಷಣೆಯ ಪ್ರಮಾಣವನ್ನು ವ್ಯಾಪಕಗೊಳಿಸಿತು. ತಾಂತ್ರಿಕ ಜ್ಞಾನದ ಬಳಕೆಯಿಂದಾಗಿ ಉತ್ಪಾದನೆಯ ವೆಚ್ಚವನ್ನು ಕಡಿಮೆಗೊಳಿಸಿತು. ಕರಕುಶಲ ಕರ್ಮಿಗಳಲ್ಲಿ ಸಂಘಟನೆ, ಕಾರ್ಯತಂತ್ರ ಮತ್ತು ಒಗ್ಗಟ್ಟನ್ನು ತಂದಿತು. ಜಾಗತೀಕ ಮಟ್ಟದ ಜ್ಞಾನ ಪಡೆಯಲು ಸಾಧ್ಯವಾಯಿತು. ಇದರ ಜೊತೆಗೆ ಜಾಗತೀಕ ಮಟ್ಟದ ಸವಾಲುಗಳನ್ನು ಎದುರಿಸಲು ಕೂಡ ಅವಕಾಶ ದೊರಕುವುದರ ಜೊತೆಗೆ ದೀರ್ಘಕಾಲೀಕವಾಗಿ ಉದ್ಯೋಗ ಪಡೆಯಲು ಸಾಧ್ಯವಾಗುತ್ತದೆ.

ಸಂಪನ್ಮೂಲಗಳ ಕೇಂದ್ರೀಕರಣ ಹಾಗೂ ಸದ್ಬಳಕೆಗೆ ಕರಕುಶಲ ಕರ್ಮಿಗಳ ಸಾಮರ್ಥ್ಯ ವಿಸ್ತರಣೆಗೆ ಅವಕಾಶ ದೊರಕಿದೆ.

**ಪರಾಮರ್ಶನ ಗ್ರಂಥಗಳು**


- ಮಹೇಶನ್ ಎಂ. (2002). ಜಾಗತೀಕರಣ ದಕ್ಷಿಣದ ದೃಷ್ಟಿಯಲ್ಲಿ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
- ಪ್ರಜ್ಞಾ, (2017). ನೇಕಾರ ಸಮುದಾಯದ ಸಾಮಾಜಿಕ ಆರ್ಥಿಕ ಬದುಕು. ಬರಹ ಪಬ್ಲಿಷಿಂಗ್ ಹೌಸ್.
- Baldevrajnayar. (2001). *Globalization and Nationalism.* Sage publication.
- Karthik Das and Gopal Sharma. (2016). *Empowerment and Socio, economic Development*, New Century Publications.
- Prema pande. (2015). *Economic Empowerment of Women.* Aadi Publication
- Rajive Kumar & Narendra Kumar. (2015). *Knowledge Society and Women Empowerment*. Sarup Book publishing private Ltd.
- Sujnana raju. (2017). *Women Empowerment in contemporary perspective*. Swastik publications.